

ಮೂಲ: ಆಂಟನ್ ಚೆಕಾವ್
ಕನ್ನಡಕ್ಕೆ: ವಾಸುದೇವ ಶರ್ಮ ಎನ್.ವಿ.
ಕಲೆ: ರೂಪಶ್ರೀ ಕಲ್ಲಿಗನೂರು



# ಅತಿಕ್ರಮಣ

ಆನರಪೇತಲ ರೈತ ವಿಚಾರಣಾ ನ್ಯಾಯಾಧೀಶರೆದುರು ಬರಿಗಾಲಿನಲ್ಲಿ ನಿಂತಿದ್ದ. ಪಟ್ಟೆಪಟ್ಟೆ ಅಂಗಿ, ತೇಪೆ ಹಾಕಿದ ಚಡ್ಡಿಯಲ್ಲಿ ಚಳಿಗೆ ಸಣ್ಣಗೆ ನಡುಗುತ್ತಿದ್ದ. ಮುಖದ ಮೇಲೆಲ್ಲಾ ಸಿಡುಬಿನ ಕಲೆ. ತಲೆಯಿಂದ ಜೋತುಬಿದ್ದಿದ್ದ ಜಟೆ, ಉದ್ದುದ್ದನೆಯ ಹುಬ್ಬಿನ ಕೂದಲ ಹಿಂದಿನ ಪುಟ್ಟಪುಟ್ಟ ಕಣ್ಣುಗಳಲ್ಲಿ ಗೀಜು ಇನ್ನೂ ಇತ್ತು. ನನ್ನನ್ನ ಬಿಟ್ಟುಬಿಡಿ ಸ್ವಾಮಿ ಎಂಬಂತೆ ಕೈಮುಗಿದು ನಿಂತಿದ್ದ.

‘ಡೆನಿಸ್ ಗ್ರಿಗೋರ್ಯೇವ್’ ನ್ಯಾಯಾಧೀಶರು ಆರಂಭಿಸಿದರು. ‘ಹೌದು ಸ್ವಾಮಿ. ನಾನೇ ಡೆನಿಸ್...’

‘ಮುಂದೆ ಬಾ. ನೋಡಯ್ಯಾ ಜುಲೈ ಏಳನೇ ತಾರೀಖು ಬೆಳಗ್ಗೆ ರೈಲ್ವೆ ಹಳಿ ಕಾವಲುಗಾರ ಇವಾನ್ ಸೆಮಿಯನೋವಿಚ್ ಅಕಿನ್‌ಫೋವ್ ಹಳಿಗಳ ಪರೀಕ್ಷೆ ಮಾಡಿಕೊಂಡು ಹೋಗುವಾಗ, ನೂರ ನಲವತ್ತೊಂದನೇ ಮೈಲಿಯಲ್ಲಿ ರೈಲು ಹಳಿಯನ್ನ ಅದರ ಕೆಳಗಿನ ಮರದ ದಿಮ್ಮಿಗಳಿಗೆ ಜೋಡಿಸೋ ನಟ್ ಅನ್ನ ನೀನು ಬಿಚ್ಚೋದನ್ನ ನೋಡಿ, ನಿನ್ನ ಹಿಡಿದುಕೊಂಡ. ನೋಡು ಆ ನಟ್ ಇದೇ ಅಲ್ವಾ. ನೀನು ಏನು ಹೇಳ್ತೀಯಾ?’

‘ಏ... ಏನು’

‘ನೀನೇನು ಮಾಡ್ತಿದ್ದೆ ಅಂತ ಅಕಿನ್‌ಫೋವ್ ಹೇಳಿದ್ದು ಸರೀನಾ?’

‘ಹಂಗಂದ್ರೆ, ಅದು ಸರೀನೇ...’

‘ಸರಿ. ಮತ್ತೆ, ರೈಲ್ವೆ ಹಳಿಯಿಂದ ನೀನ್ಯಾಕೆ ನಟ್ ತೆಗೀತಿದ್ದೆ?’

‘ಏ... ಏನು’

‘ಏಯ್...! ಬಾಯ್ ಬಿಟ್ರೆ ಏ... ಏನು ಅಂತೆ. ಸರಿಯಾಗಿ ಉತ್ತರ ಕೊಡು; ರೈಲ್ವೆ ಹಳಿಯಿಂದ ಯಾಕೆ ನೀನು ನಟ್ ತೆಗೀತಿದ್ದೆ?’

‘ನನಗೆ ಬೇಕಿಲ್ಲದಿದ್ರೆ ನಾನ್ಯಾಕೆ ನಟ್ ತೆಗೀತಿದ್ದೆ? ಒಳ್ಳೇ ತಮಾಷೆ ಇದು!’ ಡೆನಿಸ್ ಸೂರು ನೋಡಿಕೊಂಡು ಗೊಣಗಿದ.



‘ನಿನಗ್ಯಾಕಯ್ಯಾ ಆ ನಟ್ಟು?’

‘ನಟ್ಟು? ಮೀನು ಹಿಡಿಯೋ ಗಾಳಾನ ನೀರಲ್ಲಿ ಮುಳಗ್ಸಕ್ಕೆ ಅದ್ನ ನಾವು ಕಟ್ತೀವಪ್ಪ’

‘ನಾವು ಅಂದ್ರೆ?’

‘ನಾವು... ? ನಾವು ಅಂದ್ರೆ ಕ್ಲಿಮೋವ್ರೋದ ಜನ. ಬೇರೆ ಯಾರು?’

‘ನೋಡಯ್ಯಾ, ನನ್ನ ಮುಂದೆ ಸರಿಯಾಗಿ ಮಾತಾಡು. ನೀವೇನು ಜಗತ್ತಿಗೆಲ್ಲಾ ಗೊತ್ತಿರೋವ್ರೇನು? ಏನೇನೋ ಪೆದ್ದುಪೆದ್ದಾಗಿ ಆಡ್ಕೊಂಡು, ಸುಳ್ಳುಪಳ್ಳು ಹೇಳ್ಕೊಂಡು ಗಾಳಕ್ಕೆ ಕಟ್ತೀವಿ, ಇಲಿ ಬಾಲಕ್ಕೆ ಕಟ್ತೀವಿ ಅಂತೆಲ್ಲಾ ನಾಟ್ಕ ಮಾಡ್ಬೇಡ!’